



ಸುದ್ದಿ ಸಂಚಯ

# ಚಂಡೀಗಢ ಆಶ್ರಮದಲ್ಲಿ ಹೊಸ ಧ್ಯಾನಮಂದಿರದ ಲೋಕಾರ್ಪಣೆ

ಚಂಡೀಗಢ ರಾಮಕೃಷ್ಣ ಮಿಷನ್ ಆಶ್ರಮವು 2018ರ ಸೆಪ್ಟೆಂಬರ್ 7 ರಿಂದ 9 ರ ವರೆಗೆ **ವಜ್ರಮಹೋತ್ಸವವನ್ನು** ಆಚರಿಸಿತು. ಇದರ ಅಂಗವಾಗಿ ಹೊಸದಾಗಿ ನಿರ್ಮಿಸಲಾದ **ಧ್ಯಾನಮಂದಿರವು** ಲೋಕಾರ್ಪಣೆಗೊಂಡಿತು. ವಿವಿಧ ಕಾರ್ಯಕ್ರಮಗಳೊಂದಿಗೆ ನಡೆದ ಈ ಮಹೋತ್ಸವದಲ್ಲಿ ಅನೇಕ ಮಂದಿ ಗಣ್ಯರು, ಮಿಷನ್ನಿನ ಸಂನ್ಯಾಸಿಗಳು, ಭಕ್ತರು ಹಾಗೂ ಹಿತೈಷಿಗಳು ಪಾಲ್ಗೊಂಡಿದ್ದರು.

**ಸೆಪ್ಟೆಂಬರ್ 7, 2018 :** ಈ ದಿನ ನಡೆದ ಕಾರ್ಯಕ್ರಮದಲ್ಲಿ ತ್ರಿಪುರಾ ರಾಜ್ಯದ ರಾಜ್ಯಪಾಲರಾದ ಪ್ರೊ . ಕಪ್ತಾನ್‌ಸಿಂಗ್ ಸೋಲಂಕಿಯವರು ಭಾಗವಹಿಸಿದರು. **ಸ್ವಾಮಿ ವಿವೇಕಾನಂದ ಸೆಂಟರ್ ಆಫ್ ಎಕ್ಸಲೆನ್ಸ್ ಫಾರ್ ಯೂಥ್** ಎಂಬ ಚಟುವಟಿಕೆಗಾಗಿ ನಿರ್ಮಿಸಲಾದ **ಇನ್ಫೋಸಿಸ್ ಬಹೂಪಯೋಗಿ ಸಭಾಂಗಣವನ್ನು** ಅವರು ಉದ್ಘಾಟಿಸಿದರು. ವಜ್ರಮಹೋತ್ಸವದ **ಸ್ಮರಣ ಸಂಚಿಕೆಯನ್ನೂ** ಅವರು ಬಿಡುಗಡೆ ಮಾಡಿದರು. ಸುಮಾರು 130 ಮಂದಿ ಸಂನ್ಯಾಸಿ–ಬ್ರಹ್ಮಚಾರಿಗಳು ಹಾಗೂ 2000 ಮಂದಿ ಭಕ್ತರನ್ನು ಉದ್ದೇಶಿಸಿ ಅವರು ಮಾತನಾಡಿದರು. ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಲ್ಲಿ ಒಬ್ಬರಾದ ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು ಕೂಡ ಸಾಧು – ಭಕ್ತವೃಂದವನ್ನು ಉದ್ದೇಶಿಸಿ ಮಾತನಾಡಿದರು.



ಸ್ವಾಮಿ ಲೋಕೋತ್ತರಾನಂದಜಿಯವರು **'ಮಾ ಶಾರದಾದೇವಿ ಸಾಧು ನಿವಾಸ'**ವನ್ನು ಉದ್ಘಾಟಿಸಿದರು. ಹಿರಿಯ ಸಾಧುಗಳಾದ ಸ್ವಾಮಿ ಪೀತಾಂಬರನಂದಜಿ, ಸ್ವಾಮಿ ರಾಜೇಶ್ವರಾನಂದಜಿ ಹಾಗೂ ಇತರರು ಉಪಸ್ಥಿತರಿದ್ದರು. ಸಾಯಂಕಾಲ ಶ್ರೀಮತಿ ವಿನೀತಾ ಗುಪ್ತಾ ಅವರು ಹೃದಯಂಗಮವಾಗಿ ಭಜನೆಗಳನ್ನೂ ಹಾಡಿದರು.

**ಸೆಪ್ಟೆಂಬರ್ 8, 2018:** ಶ್ರೀಮತ್ ಸ್ವಾಮಿ ಗೌತಮಾನಂದಜಿ ಮಹಾರಾಜ್ ಅವರು **'ಶ್ರೀರಾಮಕೃಷ್ಣ ವಿಶ್ವಭಾವೈಕ್ಯ ಧ್ಯಾನಮಂದಿರ'**ವನ್ನು ಸಂನ್ಯಾಸಿಗಳು, ಬ್ರಹ್ಮಚಾರಿಗಳು ಹಾಗೂ ಭಕ್ತರ ಉಪಸ್ಥಿತಿಯಲ್ಲಿ ಲೋಕಾರ್ಪಣೆ ಮಾಡಿದರು. ಸ್ವಾಮಿ ದಿವ್ಯಾನಂದಜಿ, ಸ್ವಾಮಿ ವಿಮಲಾತ್ಮಾನಂದಜಿ, ಸ್ವಾಮಿ ಸರ್ವಭೂತಾನಂದಜಿ, ಸ್ವಾಮಿ ಜ್ಞಾನಲೋಕಾನಂದಜಿ, ಸ್ವಾಮಿ ಮುಕ್ತಿದಾನಂದಜಿ, ಸ್ವಾಮಿ ಪೀತಾಂಬರನಂದಜಿ, ಸ್ವಾಮಿ ಆತ್ಮಪ್ರಿಯಾನಂದಜಿ ಮುಂತಾದವರು ಈ ಸಂದರ್ಭದಲ್ಲಿ ಮಾತನಾಡಿದರು. ಬೀಬಿ ರಾಜ್ವಿಂದರ್ ಕೌರ್ ಅವರು **'ಭಜನ್ ಸಂಧ್ಯಾ'** ನಡೆಸಿಕೊಟ್ಟರು.

**ಸೆಪ್ಟೆಂಬರ್ 9, 2018:** ಸ್ವಾಮಿ ಶಾಂತಾತ್ಮಾನಂದಜಿಯವರು ದುರ್ಗಾಸಪ್ತಶತೀ ಹೋಮವನ್ನು ನಡೆಸಿಕೊಟ್ಟರು.

**ಸೆಪ್ಟೆಂಬರ್ 11, 2018:** ಸ್ವಾಮಿ ವಿವೇಕಾನಂದರ ಜಗದ್ವಿಖ್ಯಾತ ಚಿಕಾಗೋ ಉಪನ್ಯಾಸಗಳ 125ನೇ ವಾರ್ಷಿಕೋತ್ಸವವನ್ನು ಆಶ್ರಮದಲ್ಲಿ ಆಚರಿಸಲಾಯಿತು. ಸುಮಾರು 200 ಮಂದಿ ಶಾಲಾಕಾಲೇಜು ವಿದ್ಯಾರ್ಥಿಗಳು ವಿವಿಧ ಹಾಡು, ಭಾಷಣವೇ ಮುಂತಾದ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತ 2–ಡಿ ಅನಿಮೇಷನ್ ಚಿತ್ರವನ್ನು ಪ್ರದರ್ಶಿಸಲಾಯಿತು. ಚಂಡೀಗಢ ಕೇಂದ್ರಾಡಳಿತ ಪ್ರದೇಶದ ಡಿಜಿಪಿ ಶ್ರೀ ಸಂಜಯ್ ಬನಿವಾಲ್(ಐಪಿಎಸ್) ಹಾಗೂ ಪಂಜಾಬಿನ ಡಿಜಿಪಿ ಶ್ರೀ ಸಿದ್ಧಾರ್ಥ ಚಟ್ಟೋಪಾಧ್ಯಾಯ ಅವರು ಪ್ರೇರಣಾತ್ಮಕ ಭಾಷಣ ಮಾಡಿದರು. ಸ್ವಾಮಿ ಆತ್ಮಶ್ರದ್ಧಾನಂದಜಿ ಹಾಗೂ ಸ್ವಾಮಿ ತೇಜೋಮಯಾನಂದಜಿಯವರು ಪ್ರಧಾನ ಭಾಷಣ ಮಾಡಿದರು.




Managing Editor : Swami Atmajnananda
Editor : Swami Jnanayogananda
Printed and Published by Swami Atmajnananda, on behalf of Sri Ramakrishna Ashrama, Yadavagiri, Mysore and Printed at Mayur Graphics, No.C-12, Industrial Estate, Rajaji Nagar, Bangalore -560 010 and published at Sri Ramakrishna Ashrama, Yadavagiri, Mysore -570 020